" In all committees, Corporations and Boards Constituted by Government, from time to time, atleast one SC/ST member will be represented."

ಎಂದು. ಅದು ರದ್ದಾಯಿತೇ ಅಥವಾ ಜಾರಿಯಲ್ಲಿ ಇದೆಯೇ ಮತ್ತು ಸಮಾಜವಾದಿ ಸಮಾಜ ರಚನೆ ಮಾಡುವ ಕಾಲದಲ್ಲಿ ಎಲ್ಲಾ ಸೆಕ್ಷನ್‌ನವರಿಗೂ ಪ್ರಾತಿನಿಧ್ಯ ಕೊಡ ಬೇಕೆನ್ನುವ ತತ್ವವನ್ನನುಸರಿಸಿ ಸದಸ್ಯರನ್ನು ನೇಮಕ ಮಾಡುವಾಗ ಅರ್ಹತೆ, ಯೋಗ್ಯತೆ ಮತ್ತು ವಿದ್ಯಾವಂತರಾದವರು ಇಪ್ಪರೆ ಅವರನ್ನು ನೇಮಿಸುವದಕ್ಕೆ ಒಂದು ನೀತಿಯನ್ನು ಜಾರಿಗೆ ತರುತ್ತೀರಾ ಸ್ವಾಮಿ ?

ಶ್ರೀ ಡಿ ದೇವರಾಜ ಅರಸ್.— ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದೇನೆ. ತಾವು ೧೯೭೨ನೇ ಇಸವಿಯಲ್ಲಿ ಬಂದಿರತಕ್ಕ ನಿರ್ಣಯದ ಬಗ್ಗೆ ಹೇಳಿದ್ದೀರಿ. ಅದನ್ನು ಬದಲಾವಣೆ ಮಾಡಿರುವುದಾಗಲೀ ಅಥವಾ ರದ್ದಾಗಿರುವುದಾಗಲೀ ಹೇಳಲಿಕ್ಕೆ ಆಗುವುದಿಲ್ಲ. ನಿರ್ಣಯ ಏನು ಇದೆ ಅದನ್ನು ನೋಡಿಸುತ್ತೇನೆ.

MISAPPROPRIATION OF FUNDS OF T. D. B. AYURVEDI DISPENSARIES IN ARSIKERE

131. Sri H. S. SIDDAPPA (Arsikere).—

Will the Minister for Community Development and Social Welfare be pleased to state :—

(a) whether it is a fact that funds of Ayurvedic Dispensaries in T. D. B. in Arsikere were reported to be misappropriated and action taken in the matter.

(b) the designation of officials concerned involved in the misappropriation cases ?

Sri M. MALLIKARJUNASWAMY (Minister for Community Development and Social Welfare).—

(a) An amount of Rs. 16,231.31 has been held under objection and a sum of Rs. 1615 84 is proposed for recovery by the Assistant Controller of Local Audit Circle, Tumkur after auditing the accounts for the year 1970-71. The question of taking action against the officers concerned is under consideration of Government.

(b) Sriyuths K. L. Puttaswamy, the then Chief Executive Officer, G. Puttappa the office Manager, and C. H Nanjappa Shetty, II Dn. Clerk are reported to have been involved.

ಶ್ರೀ ಎಚ್. ಎಸ್. ಸಿದ್ದಪ್ಪ.—ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ೧೯೭೦–೭೧ನೇ ಸಾಲಿನಲ್ಲಿ ಆಡಿಟ ಮಾಡಿಸಿ ೧೬,೭೫೧–೫೧ ರೂಪಾಯಿಗಳ ವಸೂಲಿಯನ್ನು ತಡೆಹಿಡಿದ್ದೇವೆ ಮತ್ತು ೧೬೧೫-ಅಳ ರೂಪಾಯಿಗಳನ್ನು ರಿಕವರಿ ಮಾಡಲಿಕ್ಕೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಇನ್ನು ಎಷ್ಟು ದಿವಸದವರೆಗೆ ಇದನ್ನು ತಡೆಹಿಡಿಯುತ್ತೀರಿ ಮತ್ತು ಎಷ್ಟು ದಿವಸ ಈ ಹಣವನ್ನು ರಿಕವರಿ ಮಾಡಲಿಕ್ಕೆ ಬೇಕು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಡಿವಿಷನಲ್ ಕಮೀಷನರ್ ಅವರು ತಮ್ಮ ಶಿಫಾರಸ್ಸನ್ನು ಇದರ ಬಗ್ಗೆ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅಸಿಸ್ಟೆಂಟ್ ಕಮೀಷನರ್ ತಾಸನ, ಇವರನ್ನು ಎನ್‌ಕ್ವೈರಿ ಆಫೀಸರ್ ಆಗಿ ನೇಮಕ ಮಾಡಿ, ಎನ್‌ಕ್ವೈರಿಯನ್ನು ಕಂಡಕ್ಟ ಮಾಡಬೇಕು ಎಂದು ಬೇಕಿದೆ. ಇದನ್ನು ಅತಿ ಶೀಘ್ರವಾಗಿ ಮಾಡಿಸುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ಈ ಹಣ ದುರುಪಯೋಗದ ಸಂದರ್ಭದಲ್ಲಿ ನೀವು ಏನು ಎನ್‌ಕ್ವೈರಿ ಆಫೀಸರ್‌ನ್ನ ಹಾಕಿದ್ದೇವೆ ಎಂದು ಹೇಳಿದಿರಿ, ಅವರೂ ಕೂಡ ಈ ವ್ಯವಹಾರದಲ್ಲಿ ಷಾಮಿಲ್ ಆಗಿ ಹಣವನ್ನು ಹೊಡೆದಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಂಥ ಸರ್ಕಾರದ ಗಮನಕ್ಕೆ ಬಂದಿಲ್ಲ ಹಾಗೆ ಏನಾದರೂ ಇದ್ದರೆ ಎನ್‌ಕ್ವೈರಿ ಆಫೀಸರ್‌ನ್ನು ಅನ್ನು ಬದಲಾಯಿಸುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—೧೯೭೯ನೇ ಸಾಲಿನಲ್ಲಿ ಆದಂಥ ಹಣದ ದುರುಪಯೋಗದ ವ್ಯವಹಾರದಲ್ಲಿ ಸುಮಾರು ೧೬–೧೭ ಸಾವಿರ ರೂಪಾಯಿಗಳ ಜೆಲೆಯಾಗ ತಕ್ಕ ಆಸ್ಪತ್ರೆಗೆ ಕೊಡತಕ್ಕ ಔಷಧಿಯನ್ನು ಮಾರಿಕೊಂಡು, ಇದರಲ್ಲಿ ಅಸಿಸ್ಟೆಂಟ್ ಕಮೀಷನರ್, ಬಿಡಿಓ, ಮತ್ತು ಡಾಕ್ಟರುಗಳು ಎಲ್ಲರೂ ಸೇರಿ ಹಣವನ್ನು ಹಂಚಿಕೊಂಡಿದ್ದಾರೆ. ಇದರ ಬಗ್ಗೆ ಸರ್ಕಾರದವರು ತೀವ್ರವಾಗಿ ಕ್ರಮ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣ ಏನು ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಮಾನ್ಯ ಸದಸ್ಯರು ಹೇಳತಕ್ಕದ್ದು ಸರಿಯೆಲ್ಲ. ಇದು ೧೯೭೦–೭೧ನೇ ಇಸವಿಯ ವ್ಯವಹಾರ. ೧೯೭೯ನೇ ಇಸವಿಯದು ಅಲ್ಲ. ಇದರಲ್ಲಿ ಅಸಿಸ್ಟೆಂಟ್ ಕಮೀಷನರ್ ಎಲ್ಲಾ ಸೇರಿದ್ದಾರೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲ; ಏಕೆಂದರೆ; ಇದು ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ಅವರ ಅಧಿಕಾರ ವ್ಯಾಪ್ತಿಯಲ್ಲಿ ಇರತಕ್ಕದ್ದು. ಇವರು ಟೆಂಡರ್ ವಗೈರೆ ಎಲ್ಲಾ ಕರೆಯುವುದು. ಆದರಿಂದ ಚೀಫ್ ಎಕ್ಸಿಕ್ಯುಟೀವ್ ಆಫೀಸರು ಇದಕ್ಕೆ ಸಂಬಂಧ ಇದ್ದಾರೆಯೇ ಹೊರತು ಅಸಿಸ್ಟೆಂಟ್ ಕಮೀಷನರಿಗೂ ಇದಕ್ಕೂ ಯಾವರೀತಿಯ ಸಂಬಂಧವಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ — ದಯಮಾಡಿ ಕ್ಷಮಿಸಬೇಕು. ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರಿಗೆ ಹೇಳುತ್ತೇನೆ, ಇದು ಟೆಂಡರ್ ಕರೆಯತಕ್ಕ ವ್ಯವ

ಹಾರ ಹಲ್ಲ. ಐ ಟಿ.ಎಲ್. ನಿಂದ ಅಲ್ಲಿಂದ, ಇಲ್ಲಿಂದ ಔಷಧಿಯನ್ನು ತರಿಸಿ, ಡಾಕ್ಟರು ಗಳಿಗೆ ಔಷಧಿಯ ಪೆಟ್ಟಿಗೆಗಳನ್ನು ಕೊಡುವುದು, ಇವರು ಆ ಪೆಟ್ಟಿಗೆಗಳನ್ನು ತೆಗೆದು ಕೊಂಡು ಹೋಗಿ ಮಾರಿಕೊಳ್ಳುವುದು. ಆಗ ನಾನು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಚುನಾಯಿತ ಪ್ರತಿನಿಧಿ. ಈಗ ಪದನಿಮಿತ್ತ ಪ್ರತಿನಿಧಿ. ಅದರ ಪೂರ್ಣ ವ್ಯವಹಾರ ನನಗೆ ಗೊತ್ತಿದೆ. ತಾವು ಇದರ ಬಗ್ಗೆ ಪರಿಶೀಲನೆ ಮಾಡಿ ಇದರಲ್ಲಿ ಯಾರು ಯಾರು ಇನ್‌ವಾಲ್ವ್ ಆಗಿದ್ದಾರೆಯೋ ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಮಲ್ಲಿಕಾರ್ಜುನ ಸ್ವಾಮಿ. — ಮಾನ್ಯ ಸದಸ್ಯರಿಗೆ ನಾನು ಮತ್ತೆ ವ್ಯಸನ-ದಿಂದ ಹೇಳಬೇಕಾಗಿದೆ. ಅವರು ಹೇಳತಕ್ಕಂಥ ಮಾತು ಸರಿಯಲ್ಲ. ಅಲ್ಲಿ ಲ ಕೋಟೇಷನ್‌ಗಳನ್ನು ಲೋಕಲ್ ಮೆಡಿಕಲ್ ಸ್ಟೋರ್ಸ್‌ಗಳಿಂದ ಕಾಲಫಾರ್ ಮಾಡ-ಲಾಗಿದೆ. ಇವನ್ನು, ಆಗ ನಾನು ಟೆಂಡರ್ ಎನ್ನುವ ಅರ್ಥದಲ್ಲಿ ಹೇಳಿದೆ. ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಯಾವ ತರಾವು ಇಲ್ಲದೆ, ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಇಲ್ಲದೆ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಇದನ್ನು ಮಾಡಿದ್ದಾರೆ ಎನ್ನುವ ತಕ್ಕದ್ದನ್ನು ಆಡಿಟ್ ರಿಪೋರ್ಟಿನಲ್ಲಿ ಎತ್ತಿ ತೋರಿಸಲಾಗಿದೆ.

ಶ್ರೀ ಹಂಜಿ ಶಿವಣ್ಣ. — ತಾಲ್ಲೂಕು ಅಭಿವೃದ್ಧಿ ಮಂಡಲಿಗಳಲ್ಲಿ ಹಣ ದುರುಪ-ಯೋಗವಾದರೆ, ಇದರ ಬಗ್ಗೆ ತನಿಖೆ ಮಾಡುವುದನ್ನು ನಾಲ್ಕಾರು ವರ್ಷಗಳವರೆಗೆ ತಳ್ಳುತ್ತೀರಿ. ತರೀಕೆರೆ ತಾಲ್ಲೂಕು ಬೋರ್ಡ್ ಅಧ್ಯಕ್ಷರು ಹಣ ದುರುಪಯೋಗ ಮಾಡಿದ ಬಗ್ಗೆ ಇಷ್ಟರವರೆಗೂ ಯಾವ ಕ್ರಮವನ್ನು ತೆಗೆದುಕೊಳ್ಳದೆ ಮುಂದೂಡು-ತ್ತಿದ್ದೀರಿ. ಇದಕ್ಕೆ ಅಧಿಕಾರಿಗಳು ಕಾರಣರೋ ಅಥವಾ ಸರ್ಕಾರದವರು ಕಾರಣರೋ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ — ಮಾನ್ಯ ಸದಸ್ಯರು ಅವರ ತಾಲ್ಲೂಕು ಅಭಿವೃದ್ಧಿ ಮಂಡಲಿಯನ್ನು ಗಮನದಲ್ಲಿಟ್ಟುಕೊಂಡು ಹೇಳುತ್ತಿದ್ದಾರೆ. ಈಗಾಗಲೇ ಅವರ ಮೇಲೆಯೂ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಎಸ್. ಶಿವಪ್ಪ. — ಯಾವುದೇ ತಾಲ್ಲೂಕು ಅಭಿವೃದ್ಧಿ ಮಂಡಲಿ-ಯಲ್ಲಿ ಹಣ ದುರುಪಯೋಗವಾದ ಪ್ರಸಂಗವನ್ನು ಇಂತಿಷ್ಟು ದಿವಸದಲ್ಲಿ ಬಗೆಹರಿಸ-ಬೇಕು; ಸರ್ಚಾನುಗಟ್ಟಲೆ ಎಳೆದುಕೊಂಡು ಹೋಗುವುದು, ಅಲ್ಲಿರತಕ್ಕ ಅಸಿಸ್ಟೆಂಟ್ ಕಮೀಷನರನ್ನು ಟ್ರಾನ್ಸ್‌ಫರ್ ಮಾಡುವುದು, ಇನ್ನೊಬ್ಬ ಬಂದರೆ, ಅವರು ಈಗ ಬಂದ್ದಿದೇನಿ ಎಂದು ಹೇಳುವದು. ಇದನ್ನೆಲ್ಲಾ ತಪ್ಪಿಸಿ ಇಂತಿಷ್ಟು ದಿನದಲ್ಲಿ ಈ ಹಣದ ದುರುಪಯೋಗದ ವ್ಯವಹಾರವನ್ನು ಬಗೆಹರಿಸಬೇಕು ಇಲ್ಲವೇ ಮಾಫಿ ಮಾಡುವುದೋ, ವಸೂಲು ಮಾಡುವದೋ ಎನ್ನುವ ಬಗ್ಗೆ ಸರ್ಕಾರ ತಿರ್ಮಾನ ತೆಗೆದುಕೊಳ್ಳುತ್ತಪೆಸೀ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. — ಸಾರ್ವಜನಿಕರ ಹಣವನ್ನು ಖರ್ಚು ಮಾಡುತಕ್ಕ ಕಾಲದಲ್ಲಿ There will have to be proper accountability

ಈ ವಿಷಯದಲ್ಲಿ ಸರ್ಕಾರದ ಅಭಿಪ್ರಾಯ ಬೇರೆ ಏನೂ ಇಲ್ಲ ಮಾನ್ಯ ಸದಸ್ಯರ ಅಭಿಪ್ರಾಯವೂ, ಸರ್ಕಾರದ ಅಭಿಪ್ರಾಯವೂ ಒಂದೇ. ನಾವು ಈ ಆಡಿಟ್ ರಿಪೋರ್ಟ್‌ಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಸಾಕಾದಷ್ಟು ಸಿಬ್ಬಂದಿ ಇಲ್ಲದೆ ಇರತಕ್ಕದು ಮುಖ್ಯ ಕಾರಣ. ನಿರ್ದಿಷ್ಟ ಕಾಲದಲ್ಲಿ ಇದನ್ನು ವಸೂಲು ಮಾಡುವದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆ.

TODDY PRODUCED FROM PALM AND COCOANUT TREES

143. Sri M. H. JAYAPRAKASH NARAYANA (Sirsi).—Will the Chief Minister be pleased to state:—

(a) the extent of land in the state under the possession of Government where palm groves are grown and the present number of palm trees;

(b) the number of palm trees grown by private individuals in their lands;

(c) the average quantum of toddy produced per day from the palm trees both under Government and private lands;

(d) the number of cocoanut trees both under Government and private lands and the average quantum of toddy produced per day from these trees;

(e) whether the Investigation Officers for checking the toddy produced from palm and cocoanut trees before releasing it for sale are stationed in each taluk; if not the method of investigation;

(f) whether it has come to the notice of the Government that the toddy sold is mixed with intoxicating elements like cocoa powder and adulterated with water;

(g) if so, the steps taken by Government to prevent the same ?

Sri D. DEVARAJ URS (Chief Minister).—(a) Palm trees are grown in an extent of 1365 Acres and 17 Guntas of land. The present number of palm trees are 3,73,248.

(b) 3,96,525.

(c) 69,000 litres.